

## ನಕ್ಕುಬಿಡಿ




ಶಿಕ್ಷಕ: ವರ್ಷದಲ್ಲಿ ಅತಿ ಚಿಕ್ಕ ತಿಂಗಳು ಯಾವುದು?

ವಿದ್ಯಾರ್ಥಿ: ಮೇ ಸರ್

ಶಿಕ್ಷಕ: ಫೆಬ್ರುವರಿ ಅಲ್ವೇನಪ್ಪಾ?

ವಿದ್ಯಾರ್ಥಿ: ಮೇದಲ್ಲಿ ಒಂದೇ ಅಕ್ಷರ ಸರ್!

★★★

ಆತ: ನಿಮ್ಮ ಹೆಂಡತಿ ನಿಮ್ಮ ಕಾರು ಚಾಲಕನ ಜೊತೆ ಓಡಿ ಹೋದ ಸುದ್ದಿ ಕೇಳಿ ತುಂಬಾ ಬೇಸರ ಆಯಿತು?

ಈತ: ಅದಕ್ಕೆ ಏಕೆ ಬೇಸರ ಮಾಡಿಕೊಳ್ಳುತ್ತೀರಿ ಕಾರ್ ಡ್ರೈವಿಂಗ್ ನನಗೂ ಬರುತ್ತದೆ!

(ಸಂ) ಬಸವರಾಜ ಹುಡೇದಗಡ್ಡಿ

---

ವರನ ತಂದೆ: ಏನಮ್ಮಾ, ನಿನಗೆ ಯಾವ ಯಾವ ಲಾಂಗ್ವೇಜಸ್ ಬರುತ್ತೆ?

ಕನ್ಯೆ: ಒರಾಕಲ್, ಸ್ಯಾಪ್, ಸಿ, ಸಿ+

ವರನ ತಂದೆ: ಅಲ್ಲಮ್ಮ, ಮಾತನಾಡಲು ಯಾವ ಭಾಷೆ ಬರುತ್ತೆ ಅಂತ ಕೇಳಿದ್ದು.

★★★

ಪಕ್ಕದ ಮನೆಯಾಕೆ: ರೀ ಹೊಸ ಎಲ್ಇಡಿ ಟಿವಿ ಖರೀದಿಸಿದ್ರಾ?

ಯಜಮಾನಿ: ಹೌದ್ರೀ ಹೊಸ ಟಿವಿ!

ಪಕ್ಕದ ಮನೆಯಾಕೆ: ಟಿವಿ ಪ್ರೋಗ್ರಾಂ ನೋಡ್ತೀನ್ರಿ ಸ್ವಲ್ಪ. ಆದರೆ ಯಾರೋ ಗಂಡಸರು ಕುಳಿತಿದ್ದಾರಲ್ಲ?

ಯಜಮಾನಿ: ಅವರು ಗಂಡಸರಲ್ಲ, ನಮ್ಮ ಯಜಮಾನರು.

(ಸಂ) ಶ್ರೀಧರ ರಾಯಸಂ

---



ಗುಂಡ: ನಾನು ಹೆಂಡತಿಗೆ ಭಯ ಪಡುವುದೇ ಇಲ್ಲ!

ಪುಂಡ: ಎಂಥೆಂತಹ ದೊಡ್ಡವರೇ ಹೆಂಡತಿ ಅಂದ್ರೆ ನಡುಗುತ್ತಾರೆ. ನೀ ಏಕೆ ಹೆದರಲ್ಲ?

ಗುಂಡ: ಆಕೆ ಹೇಳಿದ ಎಲ್ಲ ಕೆಲಸಗಳನ್ನು ಮಾಡಿದ ಮೇಲೂ ನಾನ್ಯಾಕೆ ಹೆದರಬೇಕು?

(ಸಂ)ಶ್ರುತಿ ಕೆ.ಎಸ್.
ತುರುವೇಕೆರೆ




